**ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,**
ದೇವರಾಜ ಅರಸ್ ಮಾರ್ಕೆಟ್, ಹಾಸನ. 264825

| ವಾರ್ಷಿಕ ಬಡ್ಡಿ ದರದ ವಿವರಗಳು | ಸಾಮಾನ್ಯರಿಗೆ % | ಹಿರಿಯ ನಾಗರಿಕರಿಗೆ % |
|---|---|---|
| * 1 ವರ್ಷದಿಂದ 3 ವರ್ಷಗಳವರೆಗೆ | 10.5 | 11 |
| * 181ದಿನಗಳಿಂದ 365 ದಿನಗಳವರೆಗೆ | 8 | 8.5 |
| * 91 ದಿನಗಳಿಂದ 180 ದಿನಗಳವರೆಗೆ | 7 | 7.5 |
| * 31 ದಿನಗಳಿಂದ 90 ದಿನಗಳವರೆಗೆ | 6 | 6.5 |
| * 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ | | |

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ



41ನೇ ವರ್ಷದಲ್ಲಿ

# ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ









## ಅಣ್ಣಾ ಹಜಾರೆ ಉಪೇಂದ್ರ ಭೇಟಿ : ಚುನಾವಣೆ ಕುರಿತು ಚರ್ಚೆ

ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಸಮಾಜ ಸೇವೆಯ ಕುರಿತು ಕೆಪಿಜೆಪಿ ಮುಖಂಡ ಉಪೇಂದ್ರ ಅವರಿಗೆ ಸಲಹೆ ನೀಡಿದ್ದಾರೆ. ಜ.31ರಂದು ಉಪೇಂದ್ರ ಅಣ್ಣಾ ಹಜಾರೆ ಅವರನ್ನು ಭೇಟಿ ಮಾಡಿದ್ದು , ಪ್ರಸ್ತುತ ರಾಜಕೀಯ, ಪಕ್ಷದ ಉದ್ದೇಶ, ಸಮಾಜ ಸೇವೆ ಕುರಿತು ಚರ್ಚಿಸಿದ್ದಾರೆ. ಇಬ್ಬರ ನಡುವಿನ ಸಂಭಾಷಣೆಯ ವೀಡಿಯೊವನ್ನು ಉಪೇಂದ್ರ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.



## 'ಭಾರತ-ಅಮೆರಿಕ ಬಾಂಧವ್ಯ ಆಕಾಶದೆತ್ತರದಲ್ಲಿದೆ'

ಭಾರತ ಮತ್ತು ಅಮೆರಿಕ ನಡುವಣ ಬಾಂಧವ್ಯ ಬಲವರ್ಧನೆ ಮತ್ತಷ್ಟು ಸದೃಢವಾಗುತ್ತಿರುವ ಬಗ್ಗೆ ಅಪಾರ ಸಂತಸ ವ್ಯಕ್ತಪಡಿಸಿರುವ ಅಮೇರಿಕಾದ ಉನ್ನತ ರಾಜತಾಂತ್ರಿಕರಾದ ನಿಕ್ಕಿ ಹ್ಯಾಲೆ, ಉಭಯ ದೇಶಗಳ ಮಧ್ಯೆ ದ್ವಿಪಕ್ಷೀಯ ಸಂಬಂಧದ ಆಗಸಕ್ಕೆ ಎಲ್ಲೆ ಇದೆ ಎಂದೂ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಆರ್ಥಿಕ ಮತ್ತು ಆಡಳಿತಾತ್ಮಕ ಸುಧಾರಣೆಗಳನ್ನು ಅವರು ಪ್ರಶಂಸಿಸಿದ್ದಾರೆ.



## ರಾಜನಾಥ್ ಸಿಂಗ್ ಜತೆಗಿನ ಫೋಟೋಗಾಗಿ 3 ಗಂಟೆ ಕಾದ ಅಂಗವಿಕಲ ಮಕ್ಕಳು

ಗೃಹ ಸಚಿವ ರಾಜನಾಥ್ ಸಿಂಗ್ ಅವರೊಡನೆ ಫೋಟೋ ತೆಗೆದುಕೊಳ್ಳುವುದಕ್ಕಾಗಿ ಅಂಗವಿಕಲ ಮಕ್ಕಳನ್ನು ಮೂರು ಗಂಟೆಗಳ ಕಾಲ ಕಾಯಿಸಿರುವ ಘಟನೆ ಚಂಡೀಗಢದಲ್ಲಿ ವರದಿಯಾಗಿದೆ. ಚಂಡೀಗಢದ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಈ ಪ್ರಕರಣ ನಡೆದಿದೆ.


ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :71 ಶುಕ್ರವಾರ ಫೆ.2, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20


# ಚುನಾವಣಾ ಬಜೆಟ್ : ಭರಪೂರ ಕೊಡುಗೆ

ನವದೆಹಲಿ : ಪ್ರಸಕ್ತ ವರ್ಷದ ಎಂಟು ವಿಧಾನಸಭೆ ಚುನಾವಣೆ ಮತ್ತು ಮುಂದಿನ ವರ್ಷದ ಲೋಕಸಭೆ ಚುನಾವಣೆಗಳನ್ನು ಎದುರು ನೋಡುತ್ತಿರುವ ಕೇಂದ್ರ ಸರಕಾರ ಗುರುವಾರ ರೈತರು, ಜನಸಾಮಾನ್ಯರು, ಮಧ್ಯಮ ವರ್ಗದವರು ಸೇರಿದಂತೆ ಎಲ್ಲರನ್ನೂ ಒಳಗೊಂಡ ಬಜೆಟ್ ಅನ್ನು ಮಂಡಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ 2018-19ನೇ ಸಾಲಿನ ಪೂರ್ಣ ಪ್ರಮಾಣದ ಬಜೆಟ್ ಅನ್ನು ವಿತ್ತ ಸಚಿವ ಅರುಣ್ ಜೇಟ್ಲಿ ಗುರುವಾರ ಮಂಡಿಸಿದರು.

ಬಜೆಟ್‌ನಲ್ಲಿ ವೈಯಕ್ತಿಕ ಆದಾಯ ತೆರಿಗೆ ಪಾವತಿಯಲ್ಲಿ ಯಥಾಸ್ಥಿತಿ ಕಾಪಾಡಿಕೊಂಡಿದ್ದು, ಗ್ರಾಮೀಣಾಭಿವೃದ್ಧಿ ಹಾಗೂ ಕೃಷಿಗೆ ಒತ್ತು ನೀಡಲಾಗಿದೆ.

ಗ್ರಾಮೀಣ ಭಾಗದ ಮೂಲ ಸೌಕರ್ಯ ಕ್ಷೇತ್ರಕ್ಕೆ ಬಜೆಟ್‌ನಲ್ಲಿ 14.34 ಲಕ್ಷ ಕೋಟಿ ಅನುದಾನ ಘೋಷಿಸಲಾಗಿದೆ.

ಉದ್ಯೋಗ ಸೃಷ್ಟಿಸುವುದರ ಜತೆಗೆ ಈ ಹೂಡಿಕೆಯಿಂದ 3.71 ಲಕ್ಷ ಕಿ.ಮೀ. ರಸ್ತೆ ನಿರ್ಮಾಣ, 51 ಲಕ್ಷ ಹೊಸ ಮನೆ, 1.88 ಕೋಟಿ ಶೌಚಾಲಯ, 1.75 ಕೋಟಿ ಮನೆಗಳಿಗೆ ಹೊಸತಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ. *(-4ನೇ ಪುಟಕ್ಕೆ)*

### ದುಬಾರಿಯಾದ ಉತ್ಪನ್ನಗಳು

- ಮೊಬೈಲ್, ಟಿವಿ, ಕಂಪ್ಯೂಟರ್, ಎಸಿ ಹೋಟೆಲ್, ಕಾರು, ದ್ವಿಚಕ್ರ ವಾಹನ, ಬೆಳ್ಳಿ, ಚಿನ್ನ, ತರಕಾರಿ, ಹಣ್ಣಿನ ಜ್ಯೂಸ್, ತಂಪು ಕನ್ನಡಕ, ಸುಗಂಧ ದ್ರವ್ಯ (ಪರ್ಫ್ಯೂಮ್), ಟ್ರಕ್, ಬಸ್ ಟೈರ್‌ಗಳು
- ರೇಷ್ಮೆ ಬಟ್ಟೆ , ವಜ್ರ, ಎಲ್‌ಸಿಡಿ, ಎಲ್‌ಇಡಿ ಪ್ಯಾನಲ್, ಸ್ಮಾರ್ಟ್ ವಾಚ್, ಕೈ ಗಡಿಯಾರ, ಸಿಗರೇಟ್, ಕ್ಯಾಂಡಲ್

### ಬೆಲೆ ಇಳಿಕೆಯಾದ ಉತ್ಪನ್ನಗಳು

- ಪೆಟ್ರೋಲ್, ಡೀಸೆಲ್, ಗೋಡಂಬಿ ಸೋಲಾರ್ ಟೆಂಪರ್ಡ್ ಗ್ಲಾಸ್, ಕಚ್ಚಾ ವಸ್ತುಗಳು, ಆರೋಗ್ಯ ಸೇವೆಗಳು

### ರಿಯಲ್ ಎಸ್ಟೇಟ್‌ಗೆ ನಿರಾಸೆ

ಮೂಲ ಸೌಕರ್ಯ ಅಭಿವೃದ್ಧಿಗೆ ಬಜೆಟ್ ಪ್ರಸ್ತಾಪಿಸಿರುವ ಕೊಡುಗೆಗಳನ್ನು ದೇಶವ್ಯಾಪಿ ಶ್ಲಾಘಿಸಲಾಗುತ್ತಿದೆ. ಆದರೆ ರಿಯಲ್ ಎಸ್ಟೇಟ್ ವಲಯದಲ್ಲಿ ಮಾತ್ರ ನಿರೀಕ್ಷೆ ಈಡೇರದೆ ನಿರಾಸೆ ಆವರಿಸಿದೆ. ಕೆಲ ಉದ್ಯಮಿಗಳಿಗಂತೂ ತೀವ್ರ ನಿರಾಶೆ ಮೂಡಿಸಿದೆ.



### ಬಜೆಟ್ ಮುಖ್ಯಾಂಶಗಳು

- ಮೊಬೈಲ್, ಟಿ.ವಿ. ದುಬಾರಿ, ಅಬಕಾರಿ ಸುಂಕ ಶೇ.15ರಿಂದ ಶೇ.20ಕ್ಕೆ ಏರಿಕೆ
- ಭಾರತ ಏರ್‌ಪೋರ್ಟ್ ಪ್ರಾಧಿಕಾರದಡಿಯಲ್ಲಿ 124 ವಿಮಾನ ನಿಲ್ದಾಣಗಳಿದ್ದು , ಇದನ್ನು 5 ಪಟ್ಟು ಹೆಚ್ಚಿಸಲಾಗುವುದು ಮತ್ತು ಪ್ರತಿ ವರ್ಷ 1 ಬಿಲಿಯನ್ ಟ್ರಿಪ್ ಗುರಿ ಇಟ್ಟುಕೊಳ್ಳಲಾಗಿದೆ.
- ವೈದ್ಯಕೀಯ ವಿನಾಯಿತಿ ಮಿತಿ ಸೆಕ್ಷನ್ 80ರ ಅಡಿಯಲ್ಲಿ ಹಿರಿಯ ನಾಗರಿಕರಿಗೆ ವಿನಾಯಿತಿ ಮಿತಿ 10 ಸಾವಿರದಿಂದ 50 ಸಾವಿರ ರೂ.ಗಳಿಗೆ ಏರಿಕೆ
- ವೈದ್ಯಕೀಯ ವಿಮೆ 30 ಸಾವಿರದಿಂದ 50 ಸಾವಿರ ರೂ ಗೆ ಏರಿಕೆ. ಹಿರಿಯ ನಾಗರಿಕರಿಗೆ 1 ಲಕ್ಷ ರೂ.ವರೆಗೂ ಏರಿಕೆ.
- ತೆರಿಗೆ ಸ್ಲಾಬ್‌ಗಳಲ್ಲಿ ಯಾವುದೇ ಬದಲಾವಣೆ ಇಲ್ಲ. 2.5 ಲಕ್ಷ ವರೆಗಿನ ಆದಾಯಕ್ಕೆ ಯಾವುದೇ ರೀತಿಯ ತೆರಿಗೆ ಇಲ್ಲ. 2.5 ರಿಂದ 5 ಲಕ್ಷವರೆಗಿನ ಆದಾಯಕ್ಕೆ ಶೇ.5ರಷ್ಟು ತೆರಿಗೆ, 5 ಲಕ್ಷದಿಂದ 10 ಲಕ್ಷವರೆಗೆ ಶೇ.20ರಷ್ಟು ಮತ್ತು 10 ಲಕ್ಷ ಮೇಲ್ಪಟ್ಟ ಆದಾಯಕ್ಕೆ ಶೇ.30ರಷ್ಟು ತೆರಿಗೆ. 40 ಸಾವಿರ ರೂ.ವರೆಗಿನ ಸ್ಟ್ಯಾಂಡರ್ಡ್ ಡಿಡಕ್ಷನ್ ಶೀಘ್ರ ಜಾರಿ.
- ಈ ವರ್ಷ ಜಿಎಸ್‌ಟಿ 12 ತಿಂಗಳ ಬದಲಿಗೆ 11 ತಿಂಗಳಿಗೇ ಪಾವತಿ. ವೈಯಕ್ತಿಕ ಆದಾಯ ತೆರಿಗೆಯಲ್ಲಿ ಯಾವುದೇ ಬದಲಾವಣೆ ಇಲ್ಲ. ಹಿಂದಿನ ಆದಾಯ ತೆರಿಗೆಯೇ ಮುಂದುವರಿಕೆ. 90 ಸಾವಿರ ಕೋಟಿ ಆದಾಯ ತೆರಿಗೆ ಸಂಗ್ರಹ, ವಾರ್ಷಿಕ 250 ಕೋಟಿ ವಹಿವಾಟು ನಡೆಸಿದ ಕಾರ್ಪೋರೇಟ್ ಸಂಸ್ಥೆಗಳ ತೆರಿಗೆ ಕಡಿತ.
- ವಿತ್ತೀಯ ಕೊರತೆ ಶೇಕಡಾ 3ಕ್ಕೆ ಇಳಿಕೆಯಾಗಿದ್ದು , ತೆರಿಗೆಯೇತರ ಆದಾಯದಲ್ಲಿ ಏರಿಕೆಯಾಗಿದೆ. ಅಂತೆಯೇ 85 ಲಕ್ಷ ಜನರು ಐಟಿಆರ್ ಸಲ್ಲಿಕೆ ಮಾಡಿದ್ದು , ನೇರ ತೆರಿಗೆಯಲ್ಲಿ ಶೇ.17ರಷ್ಟು ಹೆಚ್ಚಳವಾಗಿದೆ. ಸದ್ಯ ದೇಶದ ತೆರಿಗೆದಾರರು 8 ಕೋಟಿ ದಾಟಿದ್ದು, ಹೊಸದಾಗಿ 5 ಕೋಟಿ ತೆರಿಗೆದಾರರು ಸೇರ್ಪಡೆ.
- 5 ಲಕ್ಷ ಹಳ್ಳಿಗಳಲ್ಲಿ ವೈಫೈ ಸೌಲಭ್ಯ. ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ಮುಂದಿನ ವರ್ಷದಲ್ಲಿ ಬಡವರಿಗಾಗಿ 2 ಕೋಟಿ ಹೆಚ್ಚುವರಿ ಶೌಚಾಲಯ ನಿರ್ಮಿಸುವ ಗುರಿ.
- 14 ಸರ್ಕಾರಿ ಕಂಪೆನಿಗಳು ಷೇರು ಮಾರುಕಟ್ಟೆಗೆ ಪ್ರವೇಶ. ಸಮಗ್ರ ಬಂಗಾರ ನೀತಿ ಜಾರಿ. ಚಿನ್ನ ನಗದೀಕರಣ ವ್ಯವಸ್ಥೆಯಲ್ಲಿ ಬದಲಾವಣೆ.
- ಎಲ್ಲಾ ಜಿಲ್ಲೆಗಳಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ
- ದೇಶದೆಲ್ಲೆಡೆ ಇರುವ ಬ್ರಾಡ್‌ಗೇಜ್ ಮಾರ್ಗ ಉನ್ನತೀಕರಣ
- ರಕ್ಷಣಾ ಇಲಾಖೆಗೆ 2 ಶಸ್ತ್ರಾಸ್ತ್ರ ನಿರ್ಮಾಣ ಕಾರಿಡಾರ್, ಖಾಸಗಿ ಹೂಡಿಕೆ.
- 1 ಲಕ್ಷ ಗ್ರಾಮ ಪಂಚಾಯಿತಿಗಳಿಗೆ ಹೈ ಸ್ಪೀಡ್ ಇಂಟರ್‌ನೆಟ್ ಸಂಪರ್ಕ.
- ಕ್ರಿಪ್ಟೋ ಕರೆನ್ಸಿಗೆ ಕಾನೂನು ಮಾನ್ಯತೆ ಇಲ್ಲ
- 700 ಲೋಕೋಮೋಟಿವ್‌ಗಳ ನಿರ್ಮಾಣ, 600 ರೈಲ್ವೆ ನಿಲ್ದಾಣಗಳ ಅಭಿವೃದ್ಧಿ.
- ಎಸ್‌ಸಿ, ಎಸ್‌ಟಿ ಅಭಿವೃದ್ಧಿಗೆ 1 ಲಕ್ಷದ 5 ಸಾವಿರ ಕೋಟಿ ರೂ. ಅನುದಾನ
- ಪ್ರವಾಸೋದ್ಯಮ ಉತ್ತೇಜನಕ್ಕೆ ನೂತನ ರಸ್ತೆ ನಿರ್ಮಾಣ. ಈ ವರ್ಷ ಮತ್ತೆ 100 ಸ್ಮಾರ್ಟ್ ಸಿಟಿ ನಿರ್ಮಾಣದ ಗುರಿ. ಸ್ಮಾರ್ಟ್ ಸಿಟಿಗೆ 2.4 ಲಕ್ಷ ಕೋಟಿ ಅನುದಾನ. ಲಡಾಕ್ ವಲಯದಲ್ಲಿ ಸುರಂಗ ನಿರ್ಮಾಣ.
- 16730 ಕೋಟಿ ರೂ. ವೆಚ್ಚದಲ್ಲಿ ಗ್ರಾಮೀಣ ಶೌಚಾಲಯ ನಿರ್ಮಾಣ

### ರಾಷ್ಟ್ರಪತಿ, ಉಪ ರಾಷ್ಟ್ರಪತಿ, ರಾಜ್ಯಪಾಲರ ವೇತನ ಹೆಚ್ಚಳ



2018-19 ನೇ ಸಾಲಿನ ಬಜೆಟ್ ಮಂಡನೆ ಮಾಡಿರುವ ಕೇಂದ್ರ ವಿತ್ತ ಸಚಿವ ಅರುಣ್ ಜೇಟ್ಲಿ, ರಾಷ್ಟ್ರಪತಿ, ಉಪ ರಾಷ್ಟ್ರಪತಿ, ರಾಜ್ಯಪಾಲರುಗಳ ಸಂಬಳವನ್ನು ಏರಿಕೆ ಮಾಡಿದ್ದಾರೆ.

ರಾಷ್ಟ್ರಪತಿಗಳ ವೇತನವನ್ನು ಪ್ರತಿ ತಿಂಗಳಿಗೆ 5 ಲಕ್ಷ ರೂಪಾಯಿ, ಉಪ ರಾಷ್ಟ್ರಪತಿಗಳ ವೇತನವನ್ನು 4 ಲಕ್ಷ ರೂಪಾಯಿ, ರಾಜ್ಯಪಾಲರುಗಳ ವೇತನವನ್ನು 3.5 ಲಕ್ಷ ರೂಪಾಯಿಗಳಿಗೆ ಏರಿಕೆ ಮಾಡಲಾಗಿದೆ. ಇದೇ ವೇಳೆ ಸಂಸದರ ವೇತನವನ್ನು ಪ್ರತಿ 5 ವರ್ಷಕ್ಕೊಮ್ಮೆ ಹಣದುಬ್ಬರವನ್ನು ಆಧರಿಸಿ ವೇತನ ಪರಿಷ್ಕರಣೆ ಮಾಡಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಸಚಿವ ಅರುಣ್ ಜೇಟ್ಲಿ ಸದನಕ್ಕೆ ತಿಳಿಸಿದ್ದಾರೆ.



"ಈ ಬಜೆಟ್ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಿದ್ದು, ಎಲ್ಲ ವಲಯಗಳಿಗೂ ಗಮನ ಹರಿಸಲಾಗಿದೆ. ಬಜೆಟ್ ರೈತ ಸ್ನೇಹಿ, ಸಾಮಾನ್ಯ ನಾಗರಿಕ ಸ್ನೇಹಿ, ಉದ್ಯಮ ಸ್ನೇಹಿ ಮತ್ತು ಅಭಿವೃದ್ಧಿ ಸ್ನೇಹಿಯಾಗಿದೆ. ಇದು ಬದುಕನ್ನು ಹಸನುಗೊಳಿಸಲು ಸಹಾಯ ಮಾಡಲಿದೆ. -ನರೇಂದ್ರ ಮೋದಿ, ಪ್ರಧಾನಿ.



"ಅಧಿಕಾರಕ್ಕೆ ಬಂದು ನಾಲ್ಕು ವರ್ಷ ಕಳೆದರೂ ರೈತರಿಗೆ ನೀಡಿದ್ದ ನ್ಯಾಯೋಚಿತ ಬೆಲೆ ಭರವಸೆ ಇನ್ನೂ ಈಡೇರಿಲ್ಲ. ಬಜೆಟ್‌ನಲ್ಲಿಯೂ ಇದೇ ಪುನರಾವರ್ತನೆಯಾಗಿದೆ. ಯುವ ಜನತೆಗೆ ಉದ್ಯೋಗಾವಕಾಶ ದೊರೆತಿಲ್ಲ. ಪುಣ್ಯಕ್ಕೆ ಇನ್ನೊಂದೇ ವರ್ಷ ಉಳಿದಿದೆ.

-ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ



"ರೈತರ ಸಾಲ ಮನ್ನಾ ಸೇರಿದಂತೆ ಕೇಂದ್ರ ಬಜೆಟ್ ಬಗ್ಗೆ ನಾವು ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೆ ಅರುಣ್ ಜೇಟ್ಲಿ ರಾಜ್ಯದ ಜನತೆಗೆ ನಿರಾಶೆ ಮಾಡಿದ್ದಾರೆ. ಚುನಾವಣೆ ಗಮನದಲ್ಲಿಟ್ಟುಕೊಂಡು ಬಜೆಟ್ ಮಂಡಿಸಲಾಗಿದೆ. ಇದು ಅಭಿವೃದ್ಧಿ ಆಧಾರಿತ ಬಜೆಟ್ ಅಲ್ಲ.

-ಸಿದ್ದರಾಮಯ್ಯ , ಮುಖ್ಯಮಂತ್ರಿ



"ಬಜೆಟ್‌ನಲ್ಲಿ ರೈತರು ಹಾಗೂ ಕೃಷಿ ಚಟುವಟಿಕೆಗಳಿಗೆ ಆದ್ಯತೆ ನೀಡಿರುವುದು ಉತ್ತಮ ಬೆಳವಣಿಗೆ. ಆದರೆ ಗ್ರಾಮೀಣ ಜನರು ಹಾಗೂ ರೈತರ ಸಮಸ್ಯೆ ಅಗಾಧವಾಗಿದೆ. ಬಜೆಟ್‌ನಲ್ಲಿ ಕೈಗೊಳ್ಳಲಾಗಿರುವ ಸುಧಾರಣಾ ಕ್ರಮಗಳು ಸಮರ್ಥವಾಗಿಲ್ಲ.

-ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

## ಸಚಿವರಿಂದ ತಾತ್ಕಾಲಿಕ ಉಪನಗರಗಳ ಕಾಮಗಾರಿ ವೀಕ್ಷಣೆ



ಶ್ರವಣಬೆಳಗೊಳ : ಜೈನಕಾಶಿ ಶ್ರವಣಬೆಳಗೊಳದಲ್ಲಿ ನಡೆಯಲಿರುವ ಮಹಾ ಮಸ್ತಕಾಭಿಷೇಕ ಮಹೋತ್ಸವದ ಅಂಗವಾಗಿ ನಿರ್ಮಾಣವಾಗುತ್ತಿರುವ ತಾತ್ಕಾಲಿಕ ಉಪನಗರಗಳಿಗೆ ಲೋಕೋಪಯೋಗಿ ಮತ್ತು ಒಳನಾಡು ಜಲಸಾರಿಗೆ ಸಚಿವ ಹೆಚ್.ಸಿ. ಮಹದೇವಪ್ಪ ಅವರು ಗುರುವಾರ ಭೇಟಿ ನೀಡಿ ಕಾಮಗಾರಿಗಳನ್ನು ವೀಕ್ಷಿಸಿದರು.

ಉಪನಗರಗಳಾದ ತ್ಯಾಗಿನಗರ, ಮಾತಾಜಿ ನಗರ ಪಂಚ ಕಲ್ಯಾಣ ನಗರ, ಕಳಶ ನಗರ 1, ಕಳಶನಗರ 2, ಅತಿಥಿ ಗಣ್ಯರ ನಗರ, ಅಧಿಕಾರಿಗಳ ನಗರ, ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ವೇದಿಕೆ ಮತ್ತು ವಸ್ತು ಪ್ರದರ್ಶನ, ಭೋಜನಾಲಯ, ಮಾಧ್ಯಮ ನಗರ, ಪೊಲೀಸ್ ನಗರ, ಮುಖ್ಯ ವೇದಿಕೆ, ಅಗ್ನಿಶಾಮಕ, ಹೆಲಿಪ್ಯಾಡ್, ತಾತ್ಕಾಲಿಕ ಬಸ್ ನಿಲ್ದಾಣ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ನಂತರ ಸಚಿವರು 108 ಚಂದ್ರಬಾಬು ಸಾಗರ ಮಹಾರಾಜರನ್ನು ಭೇಟಿ ಮಾಡಿ ಅವರೊಂದಿಗೆ ಈ ಮಹಾಮಸ್ತಕಾಭಿಷೇಕ ಮಹೋತ್ಸವದ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುನಿಗಳು, ಹೊರ ರಾಜ್ಯದಿಂದ ಬಂದಿರುವ ಜೈನ ಮುನಿಗಳಿಗೆ ಸುಸಜ್ಜಿತ ವ್ಯವಸ್ಥೆ ಹಾಗೂ ಎಲ್ಲಾ ಕೆಲಸ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಚರಿತ್ರೆಯನ್ನು ಬಿಂಬಿಸುವ ಜೈನಕಾಶಿ ಶ್ರವಣಬೆಳಗೊಳದ ಗೊಮ್ಮಟೇಶ್ವರ ಬಾಹುಬಲಿ ಮಹಾಮಸ್ತಕಾಭಿಷೇಕ ಯಶಸ್ವಿಯಾಗಿ ನಡೆಯಲು ಸರ್ಕಾರದ ಸಂಪೂರ್ಣ ಸಹಕಾರವಿದೆ ಎಂದು ಹೇಳಿದರು.

ಮಹಾಮಸ್ತಕಾಭಿಷೇಕ ಮಹೋತ್ಸವ ಅಂಗವಾಗಿ ಮೂಲ ಸೌಕರ್ಯಗಳಾದ ವಸತಿ, ಆಹಾರ, ರಸ್ತೆ, ಆರೋಗ್ಯ, ಕುಡಿಯುವ ನೀರು, ವಿದ್ಯುತ್ ಹಾಗೂ ಜರ್ಮನ್ ಟೆಕ್ನಾಲಜಿ ಅಟ್ಟಣಿಗೆ ನಿರ್ಮಾಣ ಹಾಗೂ ವಿವಿಧ ಕಾಮಗಾರಿಗಳಿಗೆ ಸರ್ಕಾರದಿಂದ ಸುಮಾರು 275 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದರು.

ಬಳಿಕ ಸಚಿವರು ಮಾತನಾಡಿ, ಮಹಾಮಸ್ತಕಾಭಿಷೇಕ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಸಕ್ತಿ ವಹಿಸಿ ಅವರ ನೇತೃತ್ವದಲ್ಲಿ 3 ಸಭೆಗಳನ್ನು ನಡೆಸಿ, ಕ್ರಿಯಾ ಯೋಜನೆ ರೂಪಿಸಿ, ಅದರಂತೆ ಕಾರ್ಯಗಳು ಸುಗಮವಾಗಿ ಪೂರ್ಣಗೊಳ್ಳಲು ಎಲ್ಲಾ ಇಲಾಖಾಧಿಕಾರಿಗಳ ಸಹಕಾರ ದೊರೆತಿದೆ ಎಂದು ತಿಳಿಸಿದರು. *(-4ನೇ ಪುಟಕ್ಕೆ)*

### ನಗರದಲ್ಲಿಂದು ಶಸ್ತ್ರಚಿಕಿತ್ಸಾ ತಜ್ಞರ 36ನೇ ವಾರ್ಷಿಕ ಸಮ್ಮೇಳನ

ಹಾಸನ : ನಗರದ ವೈದ್ಯಕೀಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಫೆಬ್ರವರಿ 2ರ ಶುಕ್ರವಾರದಿಂದ ಫೆ.4ರವರೆಗೂ ಭಾರತೀಯ ಶಸ್ತ್ರಚಿಕಿತ್ಸಾ ತಜ್ಞರ ಕರ್ನಾಟಕ ರಾಜ್ಯ ಶಾಖೆಯ 36ನೇ ವಾರ್ಷಿಕ ಸಮ್ಮೇಳನ ನಡೆಯಲಿದೆ.

ಶುಕ್ರವಾರ ಸಂಜೆ 6 ಗಂಟೆಗೆ ಆರಂಭವಾಗಲಿರುವ ಈ ಸಮ್ಮೇಳನದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಶಾಖೆಯ ಅಧ್ಯಕ್ಷ ಡಾ.ದಿಲೀಪ್ ಗೋಡ್ಸೆ ನೆರವೇರಿಸಲಿದ್ದಾರೆ. ಸಂಘದ ರಾಜ್ಯಾಧ್ಯಕ್ಷ ಡಾ.ಟಿ.ದುರ್ಗಣ್ಣ ಅಧ್ಯಕ್ಷತೆ ವಹಿಸಲಿದ್ದು, ಇಸ್ರೋ ನಿಕಟಪೂರ್ವ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ.ಬಿ.ಸಿ.ರವಿಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶಸ್ತ್ರಚಿಕಿತ್ಸಾ ರಂಗದಲ್ಲಿ ನಡೆಯುತ್ತಿರುವ ಇತ್ತೀಚಿನ ಬೆಳವಣಿಗೆಗಳು, ಹೊಸ ಹೊಸ ಸಂಶೋಧನೆಗಳು ಮತ್ತು ಆಧುನಿಕ ಉಪಕರಣಗಳು ಇತ್ಯಾದಿ ವಿಚಾರಗಳ ಬಗ್ಗೆ ಸಮ್ಮೇಳನದಲ್ಲಿ ಉಪನ್ಯಾಸ, ಚರ್ಚೆ ಮತ್ತು ಚಿಂತನ ಮಂಥನಗಳು ನಡೆಯಲಿವೆ.

## 2006ರ ಮಸ್ತಕಾಭಿಷೇಕ ಪಾರದರ್ಶಕ

### ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜುಗೆ ಶಾಸಕ ಹೆಚ್.ಡಿ.ರೇವಣ್ಣ ತಿರುಗೇಟು

ಹಾಸನ : 2006ರ ಮಸ್ತಕಾಭಿಷೇಕ ಕಾಮಗಾರಿಯನ್ನು ಪಾರದರ್ಶಕವಾಗಿ ನಡೆಸಿದ್ದೇನೆ ಎಂಬ ನಂಬಿಕೆ ನನಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರಿಗೆ ಈ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಅವರ ಹಾಗೆ ನಾನು ಮಸ್ತಕಾಭಿಷೇಕ ಕಾಮಗಾರಿಗಳನ್ನು ಇಂಥವರಿಗೇ ವಹಿಸಬೇಕು ಎಂದು ಪಟ್ಟು ಹಿಡಿದಿರಲಿಲ್ಲ. ಐತಿಹಾಸಿಕ ಕಾರ್ಯಕ್ರಮದ ಅನುದಾನದಲ್ಲಿ ಲಾಭ ಮಾಡಿಕೊಳ್ಳುವ ಕೆಟ್ಟ ಮನಸ್ಥಿತಿ ನನಗಿಲ್ಲ ಎಂದು ಶಾಸಕ ಹೆಚ್.ಡಿ.ರೇವಣ್ಣ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶ್ರವಣಬೆಳಗೊಳ ಮಸ್ತಕಾಭಿಷೇಕ ನಡೆದು 12 ವರ್ಷಗಳಾಗಿದ್ದು , ಈಗ ದಾಖಲೆ ಕೇಳಿದರೆ ನಾನೇನು ಮಾಡಲಿ? ಧೈರ್ಯವಿದ್ದರೆ ಪ್ರಕರಣವನ್ನು ಸಿಬಿಐಗೆ ವಹಿಸಲಿ. ಜತೆಗೆ ಕಳೆದ ನಾಲ್ಕೂವರೆ ವರ್ಷಗಳಿಂದ ರಾಜ್ಯದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು ಸಮಗ್ರ ತನಿಖೆ ನಡೆಸಲಿ ಎಂದು ತಿರುಗೇಟು ನೀಡಿದರು.



ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕಕ್ಕೆ ರಾಷ್ಟ್ರಪತಿ ಹಾಗೂ ಪ್ರಧಾನ ಮಂತ್ರಿಯನ್ನು ಆಹ್ವಾನಿಸುವುದು ರಾಜ್ಯ ಸರ್ಕಾರದ ಕರ್ತವ್ಯ. ಆದರೆ ಈ ನಿಟ್ಟಿನಲ್ಲಿ ಸರ್ಕಾರ ಯಾವ ರೀತಿ ಸಿದ್ಧತೆ ಮಾಡಿಕೊಂಡಿದೆ ಎಂಬುದು ನನಗೆ ತಿಳಿದಿಲ್ಲ. ಜಿಲ್ಲೆಯ ಅವಸ್ಥೆ ನೋಡಿ ಅವರುಗಳೇ ಬರಲು ಒಪ್ಪಿಗೆ ನೀಡಿಲ್ಲ ಅನಿಸುತ್ತದೆ ಎಂದು ವ್ಯಂಗ್ಯವಾಡಿದರು.

ಬಿಜೆಪಿ ಹಾಗೂ ಕಾಂಗ್ರೆಸ್ ಈ ಎರಡು ರಾಷ್ಟ್ರೀಯ ಪಕ್ಷಗಳ ಮೊದಲ ಆದ್ಯತೆ 2018ರ ಚುನಾವಣೆ ಮಾತ್ರ ಆಗಿದೆ. ಇವರಿಗೆ ರೈತಾಪಿ ವರ್ಗದ ಹಿತ ಬೇಕಿಲ್ಲ. ಸಾಲ ಬಾಧೆ ತಾಳಲಾರದೆ ರಾಜ್ಯಾದ್ಯಂತ ಈಗಾಗಲೇ 3,500ಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ರೈತ ಬೆಳೆದ ಬೆಳೆಗೆ ಬೆಂಬಲ ಬೆಲೆ, ನೀರಾವರಿಗೆ ಆದ್ಯತೆ, ಸಾಲ ಮನ್ನಾ ಮಾಡುವ ಕುರಿತು ಯೋಚಿಸಬೇಕಿದ್ದ ಸರ್ಕಾರ ಸಾಧನಾ ಸಮಾವೇಶ ಮಾಡುತ್ತಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಮೂರೂವರೆ ವರ್ಷ ಕಳೆದಿದ್ದರೂ ಪರಿವರ್ತನೆ ಹೆಸರಿನಲ್ಲಿ ರ್‍ಯಾಲಿ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಂದಿನ ಕೇಂದ್ರದ ಬಜೆಟ್ ರೈತರಿಗೆ ನಿರಾಸೆ ಉಂಟು ಮಾಡಿದೆ. ಕೇಂದ್ರ ಬಜೆಟ್‌ನಲ್ಲಿ ರೈತರಿಗೆ ಅನುಕೂಲವಾಗುವ ಯಾವ ಯೋಜನೆಯನ್ನೂ ಘೋಷಿಸಿಲ್ಲ ಎಂದು ದೂರಿದರು.

2006ರಲ್ಲಿ ಮಸ್ತಕಾಭಿಷೇಕ ನಡೆದಾಗ ನಾನೇ ಖುದ್ದಾಗಿ ಹೋಗಿ ಪ್ರಧಾನಿಗೆ ಆಮಂತ್ರಣ ನೀಡಿದ್ದೆ. ಕೇವಲ 5 ನಿಮಿಷದಲ್ಲಿ 250 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ್ದೆ . ಆ ತರಹದ ಕೆಲಸ ಇಲ್ಲಿನ ಸಚಿವರಿಂದ ನಿರೀಕ್ಷಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡ ಲಕ್ಷ್ಮಣಗೌಡ ಇತರರು ಇದ್ದರು.

## ದಲಿತ ಮುಖಂಡ ದೊರೆಯಪ್ಪ ನಿಧನ



ಹಾಸನ : ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಹಿರಿಯ ಮುಖಂಡ, ಪ್ರಗತಿಪರ ಹೋರಾಟಗಾರ, ಬೇಲೂರು ಪುರಸಭೆ ಮಾಜಿ ಸದಸ್ಯ ದೊರೆಯಪ್ಪ ಅವರು ಗುರುವಾರ ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ವಿಧಿವಶರಾಗಿದ್ದಾರೆ.

ದೊರೆಯಪ್ಪ ಅವರು ಕಳೆದ 80ರ ದಶಕದಲ್ಲಿಯೇ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮೂಲಕ ಹೋರಾಟದ ಹಾದಿಯನ್ನಿಡಿದವರು. ವಿದ್ಯಾರ್ಥಿಯಾಗಿದ್ದಾಗಲೇ ಹೋರಾಟ ಜೀವನ ಆರಂಭಿಸಿದವರು. ದಲಿತ ಮುಖಂಡ ಚಂದ್ರಪ್ರಸಾದ್ ತ್ಯಾಗಿ, ರೈತ ಮುಖಂಡರಾದ ಮಂಜುನಾಥದತ್ತ ಅವರ ಸಮಕಾಲೀನದವರಾಗಿದ್ದ ಇವರು ರಾಜ್ಯದ ಹಲವಾರು ಹೋರಾಟಗಳಲ್ಲಿ ಭಾಗವಹಿಸಿ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕಿನ ಸಮಸ್ಯೆಗಳನ್ನು ಬಗೆಹರಿಸಿದ್ದರು.

ದೊರೆಯಪ್ಪ ಅವರು ತಮ್ಮ ನಂತರದಲ್ಲಿ ಹಲವಾರು ಹಿಂಬಾಲಕರನ್ನು ಬೆಳೆಸಿ ವಿವಿಧ ಹುದ್ದೆಗಳಲ್ಲಿ ರಾಜಕೀಯ ಸ್ಥಾನಮಾನಗಳನ್ನು ದೊರಕಿಸಿಕೊಡುವಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ಇವರು ಬೇಲೂರು ವಿಧಾನಸಭೆ ಚುನಾವಣೆಗೂ ಸ್ಪರ್ಧಿಸಿದ್ದರು. ಇತ್ತೀಚೆಗೆ ಪುರಸಭೆ ನಾಮ ನಿರ್ದೇಶಿತ ಸದಸ್ಯರಾಗಿದ್ದರು.

ದೊರೆಯಪ್ಪ ಅವರನ್ನು ಅನಾರೋಗ್ಯದ ಕಾರಣ ಬುಧವಾರ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಗುರುವಾರ ಬೆಳಗ್ಗೆ 3 ಗಂಟೆ ಸಮಯದಲ್ಲಿ ತೀವ್ರ ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿಯೇ ವಿಧಿವಶರಾಗಿದ್ದಾರೆ. ಅವರು ಪತ್ನಿ ಸೇರಿದಂತೆ ಮೂವರು ಮಕ್ಕಳು, ಮೊಮ್ಮಕ್ಕಳು ಹಾಗೂ ನೂರಾರು ಅಭಿಮಾನಿಗಳನ್ನು ಅಗಲಿದ್ದಾರೆ.

*(-4ನೇ ಪುಟಕ್ಕೆ)*

## 'ವೃತ್ತಿಯಿಂದ ಜನಾಂಗ ಗುರುತಿಸುವಿಕೆ ಬೇಡ'



ಹಾಸನ : ಯಾವುದೇ ವೃತ್ತಿಯಿಂದ ಜನಾಂಗವನ್ನು ಗುರುತಿಸದೆ ಸಮಾನತೆಯಿಂದ ಬದುಕಬೇಕು ಎಂಬ ಮಡಿವಾಳ ಮಾಚಿದೇವ ಅವರ ಸಂದೇಶವನ್ನು ಎಲ್ಲರೂ ಪಾಲಿಸೋಣ ಎಂದು ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಶ್ವೇತಾ ದೇವರಾಜು ತಿಳಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರುವಾರ ಏರ್ಪಡಿಸಲಾಗಿದ್ದ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣನವರ ಕಾಯಕವೇ ಕೈಲಾಸ ವ್ಯಾಖ್ಯಾನದಂತೆ ತಾವು ಮಾಡುವ ಕೆಲಸದಲ್ಲಿ ಶ್ರದ್ಧೆ, ನಿಷ್ಠೆಯನ್ನಿಟ್ಟು ಅಚ್ಚುಕಟ್ಟಾಗಿ ಕೆಲಸ ಮಾಡುವುದರ ಬಗ್ಗೆ ಯೋಚಿಸಿದಾಗ ಮಾತ್ರ ಒಳ್ಳೆಯ ವ್ಯಕ್ತಿಯಾಗಿ ಯಶಸ್ಸು ಕಾಣಲು ಸಾಧ್ಯ ಎಂದು ಹೇಳಿದರು.

ಮೂಢನಂಬಿಕೆ, ಜಾತಿ, ಭೇದ ಮತ್ತು ಸಾಮಾಜಿಕ ಏರುಪೇರುಗಳ ವಿರುದ್ಧ ಹೋರಾಡಿದ ಮಡಿವಾಳ ಮಾಚಿದೇವರು ಶಿಕ್ಷಣಕ್ಕೂ ಹೆಚ್ಚಿನ ಒತ್ತು ನೀಡಿದ್ದವರು. ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಾರೆ . ಅವರ ಜೀವನ ತತ್ವ , ಆದರ್ಶಗಳು ಅನುಕರಣೀಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಎಸ್.ಪ್ರಕಾಶ್ ಮಾತನಾಡಿ, ಸಮಾಜದ ಕೆಲಸ ಮಾಡುವಾಗ ಎಲ್ಲಾ ಜನಾಂಗದವರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಪ್ರೀತಿ-ವಿಶ್ವಾಸದಿಂದ ಪ್ರತಿಯೊಂದು ಜನಾಂಗಕ್ಕೂ ಸಮಾನತೆ ದೊರುಕುವಂತಾಗಬೇಕು ಎಂದರು.

ನಮ್ಮ ದೇಶಕ್ಕಾಗಿ ಹೋರಾಡಿದ ಮಹಾನ್ ವ್ಯಕ್ತಿಗಳ ಬಗ್ಗೆ ತಿಳಿಯುವುದು ನಮ್ಮ ಆದ್ಯ ಕರ್ತವ್ಯ ಎಂದು ಶಾಸಕರು ಹೇಳಿದರು.

ತಾಲ್ಲೂಕು ಪಂಚಾಯತ್ ಅಧ್ಯಕ್ಷ ಬಿ.ಟಿ ಸತೀಶ್ ಮಾತನಾಡಿ, ಮಡಿವಾಳ ಮಾಚಿದೇವರು ಸಮಾಜದ ಒಳಿತಿಗಾಗಿ ಹೋರಾಡಿದ ದಿಟ್ಟತನದ ವ್ಯಕ್ತಿತ್ವ ಹೊಂದಿದ್ದವರು. ಜಾತೀಯತೆ, ಅಸಮಾನತೆ ವಿರುದ್ಧ ಹೋರಾಡಿದ ಮಹಾನ್ ವ್ಯಕ್ತಿ ಎಂದು ಹೇಳಿದರು.

*(-4ನೇ ಪುಟಕ್ಕೆ)*


### ಉತ್ತರ ಕ್ರಿಯಾರಾಧನೆಗೆ ಆಹ್ವಾನ



ಶ್ರೀ ಬಿ.ಹೆಚ್.ವೆಂಕಟೇಶ್
ಜನನ : 27-05-1951
ಮರಣ : 23-01-2018

**ಶ್ರೀ ಬಿ.ಹೆಚ್.ದೇವರಾಜು**
(ದಿ|| ಬಿ.ಹೆಚ್.ಹನುಮೇಗೌಡರ ಮಗ) ಬಸೆಟ್ಟಿಕೊಪ್ಪಲು,ಹಾಸನ.
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 23-1-2018ನೇ ಮಂಗಳವಾರ ನನ್ನ ಸಹೋದರ
**ಶ್ರೀ ಬಿ.ಹೆಚ್.ವೆಂಕಟೇಶ್**
(ಮಾಜಿ ನಗರಸಭಾ ಸದಸ್ಯರು, ಹಾಸನ)
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ **"ಉತ್ತರಕ್ರಿಯಾರಾಧನೆ "ಯನ್ನು ದಿ:03-02-2018ನೇ ಶನಿವಾರ ಮಧ್ಯಾಹ್ನ 12-00 ಗಂಟೆಗೆ ಹಾಸನ ನಗರದ ಗೌರಿಕೊಪ್ಪಲು ಮುಖ್ಯರಸ್ತೆಯಲ್ಲಿರುವ ಹನುಮಮ್ಮ ಚಲುವಯ್ಯ ಕನ್‌ವೆನ್‌ಷನ್ ಹಾಲ್‌ನಲ್ಲಿ** ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಬೇಕಾಗಿ ಕೋರುವ,

ತಮ್ಮ ವಿಶ್ವಾಸಿಗಳು: ಶ್ರೀ ಬಿ.ಹೆಚ್.ದೇವರಾಜು
ಮೃತರ ಪತ್ನಿ : ಶ್ರೀಮತಿ ಚೂಡಾಮಣಿ, ಮಗ : ಬಿ.ವಿ.ನಟೇಶ್‌ಕುಮಾರ್, ವಕೀಲರು
ಸಹೋದರ : ಶ್ರೀ ಬಿ.ಹೆಚ್.ಹನುಮಂತೇಗೌಡ ಮತ್ತು ಸಹೋದರಿಯರು.

ದುಃಖ ಭಾಗಿಗಳು:
ದಿ|| ಶ್ರೀಮತಿ ಲಕ್ಷ್ಮಮ್ಮ ಹನುಮಂತೇಗೌಡರ ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ.